3) ನ್ಯಾಯಾಲಯ ಪ್ರಾರಂಭಿಸಲು ಸೂಕ್ತವಾದ ಕಟ್ಟಡ ಲಭ್ಯವಾದ ನಂತರ ಯಳಂದೂರು ತಾಲ್ಲೂಕಿನಲ್ಲಿ ಕಿರಿಯ ಶ್ರೇಣಿಯ ನ್ಯಾಯಾಲಯವನ್ನು ಪ್ರಾರಂಭಿಸಲಾಗುವುದು.

ಯಳಂದೂರು ತಾಲ್ಲೂಕು ಶ್ರೀ ಬಿಳಿಗಿರಿ ರಂಗನಬೆಟ್ಟದ ಅಭಿವೃದ್ಧಿ

1297 (1539) ಶ್ರೀ ಜಿ.ಎನ್.ನಂಜುಂಡಸ್ವಾಮಿ (ಕೊಳ್ಳೆಗಾಲ) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಯಳಂದೂರು ತಾಲ್ಲೂಕಿನಲ್ಲಿರುವ ಬಿಳಿಗಿರಿ ರಂಗನ ಬೆಟ್ಟದ ಸರ್ವೋತೋಮುಖ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳು ಯಾವುವು?

ಆ) ಕಳೆದ 3 ವರ್ಷಗಳಲ್ಲಿ ಎಷ್ಟು ಹಣವನ್ನು ಈ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರ ನಿಗದಿಗೊಳಿಸಿದೆ, ಹಾಗೂ ಯಾವ ಯಾವ ಬಾಬ್ತುಗಳಿಗಾಗಿ ಈ ಹಣವನ್ನು ವೆಚ್ಚ ಮಾಡಲಾಗಿದೆ?

ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) 1. ಕರ್ನಾಟಕ ಪ್ರವಾಸೋದ್ಯಮ ಕಾರ್ಯ ನೀತಿಯ ಅಡಿಯಲ್ಲಿ ಬಿಳಿಗಿರಿ ರಂಗನ ಬೆಚ್ಚ ಹಾಗೂ ಇಡೀ ಯಳಂದೂರು ತಾಲ್ಲೂಕನ್ನು ಪ್ರವಾಸಿ ಕೇಂದ್ರವೆಂದು ಗುರುತಿಸಲಾಗಿದೆ.

2) ಬಿಳಿಗಿರಿರಂಗನ ಬೆಟ್ಟದಲ್ಲಿ ಇಲಾಖೆಯಿಂದ ಸುಮಾರು 6.00ಲಕ್ಷ ಅಂದಾಜಿನಲ್ಲಿ ಪ್ರವಾಸಿ ಉಪಹಾರ ಗೃಹವನ್ನು ನಿರ್ಮಿಸಲಾಗುತ್ತದೆ.

3) ಬಿಳಿಗಿರಿ ರಂಗನ ಬೆಟ್ಟದ ಬಳಿ ಕೆ.ಗುಡಿಯಲ್ಲಿ ಪ್ರವಾಸಿ ಕಾಟೇಜುಗಳನ್ನು ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆ ನಡೆಸುತ್ತಿದೆ.

ಆ) ಕೆ. ಗುಡಿಯಲ್ಲಿ ಕಳೆದ 3 ವರ್ಷಗಳಲ್ಲಿ ಪ್ರವಾಸಿ ಸೌಲಭ್ಯಗಳ ಉನ್ನತೀಕರಣಕ್ಕಾಗಿ ರೂ. 33.08 ಲಕ್ಷ ವೆಚ್ಚ ಮಾಡಲಾಗಿದೆ.

ಮುಂಡರಗಿ ತಾಲ್ಲೂಕಿನಲ್ಲಿ ಮಿನಿವಿಧಾನಸೌಧ

1298 (1382) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ತಾಲ್ಲೂಕು ಕಛೇರಿ ಬಹಳ ಶಿಥಿಲಗೊಂಡಿದ್ದು ಮಳೆಗಾಲದಲ್ಲಿ ಸೋರುವುದರಿಂದ ದಾಖಲೆಗಳು ಹಾಳಾಗುತ್ತಿರುವುದರಿಂದ ಅಲ್ಲಿ ಮಿನಿವಿಧಾನಸೌಧ ಕಟ್ಟಡವನ್ನು ಎಂದು ಕಟ್ಟಲು ಪ್ರಾರಂಭಿಸಲಾಗುವುದು?

ಶ್ರೀಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಮುಂಡರಗಿ ತಾಲ್ಲೂಕು ಕಛೇರಿ ಕಟ್ಟಡ ಹಳೆಯದಾಗಿರುತ್ತದೆ. ರಿಕಾರ್ಡ್ ರೂಮ್ ಮೇಲ್ಛಾವಣಿ ಮಣ್ಣಿನಿಂದ ನಿರ್ಮಿತವಾಗಿದ್ದು ಮಳೆಗಾಲದಲ್ಲಿ ಸೋರುತ್ತದೆ. ಅನುದಾನದ ಲಭ್ಯತೆಯನ್ನು ಗಮನದಲ್ಲಿಟ್ಟು ಕೊಂಡು ಮುಂದಿನ ವರ್ಷಗಳಲ್ಲಿ ಮಿನಿವಿಧಾನಸೌಧ ನಿರ್ಮಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.